ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

DR. MANMOHAN SINGH
BENGALURU CITY UNIVERSITY

ಆಗು ನೀ ಅನಿಕೇತನ
BE BOUNDLESS

ಕುಲಸಚಿವರ (ಆಡಳಿತ) ಕಚೇರಿ, ಜ್ಞಾನ ಜ್ಯೋತಿ ಸೆಂಟ್ರಲ್ ಕಾಲೇಜು ಆವರಣ, ಡಾ. ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು - 560001
ದೂ.ಸಂ.: 080-22961016/22131385 ಇ-ಮೇಲ್ ಐಡಿ: registrar@bcu.ac.in / registrarbcu@gmail.com

**ಸಂ:** ಡಾ.ಮಸಿಂಬೆಂನವಿ/ಶೈಕ್ಷಣಿಕ/ಸ್ನಾತಕೋತ್ತರ ಪ್ರವೇಶಾತಿ/2026-27 **ದಿನಾಂಕ:** 18.08.2026

# ಸುತ್ತೋಲೆ

**ವಿಷಯ:** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿ ಕೌನ್ಸಿಲಿಂಗ್ ಪ್ರಕ್ರಿಯೆಗೆ ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳುವ ಕುರಿತು.

**ಉಲ್ಲೇಖ:** 1. ವಿ.ವಿ. ಅಧಿಸೂಚನೆ ಸಂ: ಬೆಂ.ನ.ವಿ/ಶೈಕ್ಷಣಿಕ/ಸ್ನಾ.ಕೋ.ಪ್ರವೇಶ/2026-27/033 ದಿನಾಂಕ: 01.07.2026.
2. ಈ ಕಚೇರಿಯ ಅಧಿಸೂಚನೆ ಸಂ: ಡಾ.ಮಸಿಂಬೆಂನವಿ/ಶೈಕ್ಷಣಿಕ/ಸ್ನಾತಕೋತ್ತರ ಪ್ರವೇಶಾತಿ/2026-27, ದಿನಾಂಕ: 17.08.2026.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 17.08.2026

******

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, 2026-27ನೇ ಶೈಕ್ಷಣಿಕ ಸಾಲಿಗೆ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜು, ಸ್ನಾತಕೋತ್ತರ ಕೇಂದ್ರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗಾಗಿ **ದಿನಾಂಕ: 20.08.2026 ರಿಂದ 25.08.2026 ರವರೆಗೆ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು** ನಡೆಸಲಾಗುವುದು.

ಆದ್ದರಿಂದ, ಸಂಬಂಧಪಟ್ಟ ಎಲ್ಲಾ **ಡೀನ್‌ಗಳು ಹಾಗೂ ವಿಭಾಗದ ಅಧ್ಯಕ್ಷರು/ಮುಖ್ಯಸ್ಥರು** ತಮ್ಮ ವಿಭಾಗಗಳಲ್ಲಿ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸಲು ಅಗತ್ಯ ಸಿದ್ಧತೆಗಳನ್ನು ಕೈಗೊಳ್ಳಬೇಕು.

ಕೌನ್ಸಿಲಿಂಗ್ ಪ್ರಕ್ರಿಯೆಗಾಗಿ ವಿಭಾಗವಾರು **ದಿನಾಂಕ, ಸಮಯ ಮತ್ತು ಸ್ಥಳವನ್ನು ನಿಗದಿಪಡಿಸಿ**, ಅರ್ಹ ಅಭ್ಯರ್ಥಿಗಳಿಗೆ ಅಗತ್ಯ ಮಾಹಿತಿಯನ್ನು ನೀಡಬೇಕು. ಈಗಾಗಲೇ ಅರ್ಜಿ ಸಲ್ಲಿಸಿರುವ ಹಾಗೂ ಇದುವರೆಗೆ ಅರ್ಜಿ ಸಲ್ಲಿಸದಿರುವ, ಅರ್ಹತೆಯನ್ನು ಹೊಂದಿರುವ ವಿದ್ಯಾರ್ಥಿಗಳಿಗೂ ಕೌನ್ಸಿಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಬೇಕು.

ಪ್ರವೇಶಾತಿ ಪ್ರಕ್ರಿಯೆಯನ್ನು ವಿಶ್ವವಿದ್ಯಾಲಯದ ನಿಯಮಗಳು ಹಾಗೂ ಮಾರ್ಗಸೂಚಿಗಳನ್ವಯ ಪಾರದರ್ಶಕವಾಗಿ ಮತ್ತು ಸುಸೂತ್ರವಾಗಿ ನಡೆಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಸಲಾಗಿದೆ.

ಸದರಿ ವಿಷಯವನ್ನು **ತುರ್ತು ಹಾಗೂ ಅಗತ್ಯ ಕ್ರಮಕ್ಕಾಗಿ** ಪರಿಗಣಿಸುವುದು.

**ಕುಲಸಚಿವರು**

**ಇವರಿಗೆ,**

1. ಡೀನ್, ಸಂಬಂಧಪಟ್ಟ ಎಲ್ಲಾ ವಿಭಾಗಗಳು/ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ.
2. ಅಧ್ಯಕ್ಷರು, ಸಂಬಂಧಪಟ್ಟ ಸ್ನಾತಕೋತ್ತರ ವಿಭಾಗಗಳು, ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ.
3. ವಿಶ್ವವಿದ್ಯಾಲಯದ **ವ್ಯಾಪ್ತಿಯಲ್ಲಿರುವ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುತ್ತಿರುವ ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು/ಸಂಬಂಧಪಟ್ಟ ಅಧಿಕಾರಿಗಳಿಗೆ,** 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಈ ಕೆಳಕಂಡ ಕ್ರಮಗಳನ್ನು ತುರ್ತಾಗಿ ಕೈಗೊಳ್ಳುವಂತೆ ಸೂಚಿಸಲಾಗಿದೆ:
   i. ಕಾಲೇಜು ಆಡಳಿತದ **College Admin Login** ಮೂಲಕ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ Seat Allocation ವಿವರಗಳನ್ನು ನಿಗದಿತ ಅವಧಿಯೊಳಗೆ ದಾಖಲಿಸಿ/ನವೀಕರಿಸಬೇಕು.
   ii. ಪ್ರತಿ ಸ್ನಾತಕೋತ್ತರ ಕೋರ್ಸಿಗೆ ಸಂಬಂಧಿಸಿದಂತೆ **ಸರ್ಕಾರಿ ಕೋಟಾ (Government Quota)** ಹಾಗೂ **ಮ್ಯಾನೇಜ್ಮೆಂಟ್ ಕೋಟಾ (Management Quota)** ಸೀಟುಗಳ ವಿವರಗಳನ್ನು ನಿಯಮಾನುಸಾರ ನಿಗದಿಪಡಿಸಿ College Admin Login ನಲ್ಲಿ ನಮೂದಿಸಬೇಕು.

iii. ಸರ್ಕಾರಿ ಕೋಟಾ (ವಿಶ್ವವಿದ್ಯಾಲಯದ ಶುಲ್ಕವನ್ನು ಹೊರತುಪಡಿಸಿ) ಹಾಗೂ ಮ್ಯಾನೇಜ್‌ಮೆಂಟ್ ಕೋಟಾಗಳಿಗೆ ಅನ್ವಯವಾಗುವ **ಪ್ರವೇಶಾತಿ ಶುಲ್ಕದ** ವಿವರಗಳನ್ನು College Admin Login ನಲ್ಲಿ ಸರಿಯಾಗಿ ನಮೂದಿಸಿ ದೃಢೀಕರಿಸಬೇಕು.

iv. ಮೇಲ್ಕಂಡ Seat Allocation ಹಾಗೂ Fee Details ನಮೂದಿಸಿದ ನಂತರ, ವಿವರಗಳನ್ನು ಪರಿಶೀಲಿಸಿ ಯಾವುದೇ ದೋಷಗಳಿಲ್ಲದಂತೆ ಖಚಿತಪಡಿಸಿಕೊಳ್ಳಬೇಕು.

v. ಸದರಿ ಕಾರ್ಯವನ್ನು **ಸ್ನಾತಕೋತ್ತರ ಪ್ರವೇಶಾತಿ ಕೌನ್ಸಿಲಿಂಗ್ ಪ್ರಕ್ರಿಯೆ ಪ್ರಾರಂಭವಾಗುವ ಮುನ್ನವೇ ತುರ್ತಾಗಿ ಪೂರ್ಣಗೊಳಿಸಿ**, ಪ್ರವೇಶಾತಿ ಪ್ರಕ್ರಿಯೆ ಸುಗಮವಾಗಿ ನಡೆಯಲು ಸಹಕರಿಸುವಂತೆ ತಿಳಿಸಲಾಗಿದೆ.

**ಪ್ರತಿ:**

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳಿಗೆ, ಮಾಹಿತಿಗಾಗಿ.
2. ಮಾನ್ಯ ಕುಲಸಚಿವರ ಕಚೇರಿಗೆ, ಮಾಹಿತಿಗಾಗಿ.
3. ಸಂಬಂಧಪಟ್ಟ ಕಡತಕ್ಕೆ.